ಶಿವಾನಂದ ನೀಲಣ್ಣವರ್‌ಗೆ ಸೇರಿದ 427 ಕೋಟಿ ರೂ. ಆಸ್ತಿ ಇಡಿ ಜಪ್ತಿ

ಉದಯಕಾಲ ನ್ಯೂಸ್, ಬೆಂಗಳೂರು: ಹೂಡಿಕೆದಾರರಿಗೆ ಮಾಸಿಕ ಶೇ.3ರಷ್ಟು ಲಾಭಾಂಶ ನೀಡುವ ಆಮಿಷವೊಡ್ಡಿ ಸುಮಾರು 2,459 ಕೋಟಿ ರೂ ವಂಚಿಸಿದ ಬಹುಕೋಟಿ ಪೋಂಜಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇಡಿ) ಮಹತ್ವದ ಕ್ರಮ ಕೈಗೊಂಡಿದೆ.

ಬೆಳಗಾವಿ ಮೂಲದ ಶಿವಂ ಅಸೋಸಿಯೇಟ್ಸ ಸಂಸ್ಥೆಯ ಮುಖ್ಯಸ್ಥ ಶಿವಾನಂದ ಸಿದ್ದಪ್ಪ ನೀಲಣ್ಣವರ್ ಹಾಗೂ ಅವರ ವಿವಿಧ ಸಂಸ್ಥೆಗಳಿಗೆ ಸೇರಿದ ಒಟ್ಟು 427.16 ಕೋಟಿ ರೂಪಾಯಿ ಮೌಲ್ಯದ ಚರ ಮತ್ತು ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಜಪ್ತಿ ಮಾಡಿದೆ.

ಹೆಚ್‌ಡಿಎಫ್‌ಸಿ, ಐಸಿಐಸಿಐ, ಐಡಿಎಫ್‌ಸಿ ಫಸ್ಟ್, ಕೋಟಕ್ ಮಹೀಂದ್ರಾ, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಸೇರಿದಂತೆ ವಿವಿಧ ಬ್ಯಾಂಕ್‌ಗಳು ಮತ್ತು ಸಹಕಾರ ಸಂಘಗಳಲ್ಲಿದ್ದ 367.77 ಕೋಟಿ ರೂಪಾಯಿ ಮೌಲ್ಯದ ಸ್ಥಿರ ಠೇವಣಿಗಳನ್ನು (ಎಫ್‌ಡಿ) ಜಪ್ತಿ ಮಾಡಲಾಗಿದೆ. ಅಲ್ಲದೆ, 47 ಬ್ಯಾಂಕ್ ಖಾತೆಗಳಲ್ಲಿದ್ದ 44.37 ಕೋಟಿ ರೂ ನಗದು, 13.68 ಕೋಟಿ ರೂ ಮೌಲ್ಯದ 42 ಕೃಷಿ ಜಮೀನುಗಳು, ಬಂಗಲೆಗಳು, ಅಪಾರ್ಟ್‌ಮೆಂಟ್‌ಗಳು ಹಾಗೂ ಸಿಡಿಎಸ್‌ಎಲ್ ಖಾತೆಗಳಲ್ಲಿದ್ದ 1.31 ಕೋಟಿ ರೂಪಾಯಿ ಮೌಲ್ಯದ ಷೇರು ಹೂಡಿಕೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಇಡಿ ತಿಳಿಸಿದೆ.



35 ಸಾವಿರ ಹೂಡಿಕೆದಾರರಿಗೆ ವಂಚನೆ: ಬೆಳಗಾವಿಯ ಮಾಳಮಾರುತಿ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ, ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಕಾಯ್ದೆ ಹಾಗೂ ಕೆಪಿಐಡಿ ಕಾಯ್ದೆಯಡಿ ದಾಖಲಾಗಿದ್ದ ಎಫ್‌ಐಆರ್ ಆಧರಿಸಿ ಇಡಿ ತನಿಖೆ ಆರಂಭಿಸಿತ್ತು.

ಶಿವಾನಂದ ನೀಲಣ್ಣವರ್ ಮತ್ತು ಅವರ ಸಹಚರರು ಕರ್ನಾಟಕ, ಮಹಾರಾಷ್ಟ್ರ, ಗೋವಾ ಹಾಗೂ ಛತ್ತೀಸ್‌ಗಢ ಸೇರಿದಂತೆ ಹಲವು ರಾಜ್ಯಗಳಲ್ಲಿ ಏಜೆಂಟರ ಜಾಲ ನಿರ್ಮಿಸಿದ್ದರು. ಏಜೆಂಟರಿಗೆ ಶೇ.0.5ರಷ್ಟು ಕಮಿಷನ್ ನೀಡುವ ಆಮಿಷವೊಡ್ಡಿ ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸಲಾಗುತ್ತಿತ್ತು. ಈ ಮೂಲಕ 35 ಸಾವಿರಕ್ಕೂ ಅಧಿಕ ಹೂಡಿಕೆದಾರರಿಂದ ಸುಮಾರು 2,459 ಕೋಟಿ ರೂಪಾಯಿ ಸಂಗ್ರಹಿಸಲಾಗಿತ್ತು. ಹಳೆಯ ಹೂಡಿಕೆದಾರರಿಗೆ ಲಾಭಾಂಶ ಪಾವತಿಸಲು ಹೊಸ ಹೂಡಿಕೆದಾರರ ಹಣ ಬಳಸುವ ಮೂಲಕ ವಂಚನೆ ನಡೆಸಲಾಗಿತ್ತು ಎಂದು ಇಡಿ ಆರೋಪಿಸಿದೆ.

185 ಕೋಟಿ ರೂ. ನಷ್ಟ: ಸಾರ್ವಜನಿಕರಿಂದ ಸಂಗ್ರಹಿಸಿದ ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ್ದ ಶಿವಾನಂದ ನೀಲಣ್ಣವರ್ ಸುಮಾರು 185.95 ಕೋಟಿ ರೂಪಾಯಿ ನಷ್ಟ ಅನುಭವಿಸಿದ್ದರು ಎಂದು ತನಿಖೆಯಲ್ಲಿ ತಿಳಿದುಬಂದಿದೆ.

ಇದಲ್ಲದೆ, ಶ್ರೀಮಾತಾ ಪತ್ತಿನ ಸಹಕಾರಿ ಸಂಘ ಮತ್ತು ಧನಶ್ರೀ ವಿವಿಧೋದ್ದೇಶ ಸಹಕಾರಿ ಸಂಘಗಳ ಮೂಲಕ ಸುಮಾರು 25 ಕೋಟಿ ರೂಪಾಯಿಗಳನ್ನು ಸುಳ್ಳು ಸ್ಥಿರ ಠೇವಣಿಗಳ ರೂಪದಲ್ಲಿ ಇರಿಸಿ, ಅವುಗಳ ಆಧಾರದ ಮೇಲೆ ಸಾಲ ಪಡೆದು ಜಮೀನು ಖರೀದಿಸಿರುವ ಆರೋಪವೂ ಇದೆ. ಹಣವನ್ನು ಪತ್ನಿ ಮತ್ತು ಅಪ್ರಾಪ್ತ ಮಗನ ವೈಯಕ್ತಿಕ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿತ್ತು. ಶಿವಂ ಸೇವಾ ಪ್ರೈವೇಟ್ ಲಿಮಿಟೆಡ್, ಶಿವಂ ಲೈಫ್‌ಲೈನ್ ಮತ್ತು ಶಿವಂ ಫುಡ್ಸ್ ಸೇರಿದಂತೆ ವಿವಿಧ ಸಂಸ್ಥೆಗಳಿಗೂ ಕೋಟ್ಯಂತರ ರೂಪಾಯಿ ವರ್ಗಾವಣೆಯಾಗಿತ್ತು. ಅಲ್ಲದೆ, ಹೂಡಿಕೆದಾರರಿಂದ ಸಂಗ್ರಹಿಸಿದ 5 ಕೋಟಿ ರೂಪಾಯಿಗಳನ್ನು 'ಚಾಂಪಿಯನ್' ಕನ್ನಡ ಚಲನಚಿತ್ರ ನಿರ್ಮಾಣಕ್ಕೂ ಬಳಸಲಾಗಿದೆ ಎಂದು ಇಡಿ ತಿಳಿಸಿದೆ. ಆಗಸ್ಟ್‌ನಲ್ಲಿ 8 ಕಡೆ ದಾಳಿ: ಪ್ರಕರಣಕ್ಕೆ ಸಂಬಂಧಿಸಿದಂತೆ ಕಳೆದ ಆಗಸ್ಟ್‌ನಲ್ಲಿ ಬೆಳಗಾವಿ, ಚಿಕ್ಕೋಡಿ ಮತ್ತು ನಿಪ್ಪಾಣಿ ಸೇರಿದಂತೆ ಎಂಟು ಪ್ರಮುಖ ಸ್ಥಳಗಳಲ್ಲಿ ಇಡಿ ಅಧಿಕಾರಿಗಳು ಶೋಧ ಕಾರ್ಯಾಚರಣೆ ನಡೆಸಿದ್ದರು. ಈ ವೇಳೆ ಕೈಬರಹದ ಲೆಕ್ಕಪತ್ರಗಳು, ಡಿಜಿಟಲ್ ಸಾಕ್ಷ್ಯಗಳು ಹಾಗೂ ಮೊಬೈಲ್ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಸುಮಾರು 2.02 ಕೋಟಿ ರೂಪಾಯಿ ಹೊಂದಿದ್ದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಪಿಎಂಎಲ್‌ಎ ವಿಶೇಷ ನ್ಯಾಯಾಲಯದಲ್ಲಿ ಆರೋಪಿಗಳ ವಿರುದ್ಧ ಪ್ರಾಸಿಕ್ಯೂಷನ್ ದೂರು ಸಲ್ಲಿಸಲಾಗಿದ್ದು, ಮುಂದಿನ ತನಿಖೆ ಮುಂದುವರಿದಿದೆ ಎಂದು ಜಾರಿ ನಿರ್ದೇಶನಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಸಿಎಂ ಡಿ.ಕೆ.ಶಿವಕುಮಾರ್ ಮಹಾತ್ವಾಕಾಂಕ್ಷಿ ಗ್ರಾಮಾನುಭವ ಯೋಜನೆಗೆ ಇಂದು ಚಾಲನೆ

ಉದಯಕಾಲ ನ್ಯೂಸ್, ಬೆಂಗಳೂರು : ನಗರ ಪ್ರದೇಶದ ಶಾಲಾ ವಿದ್ಯಾರ್ಥಿಗಳಿಗೆ ಗ್ರಾಮೀಣ ಜೀವನದ ನೈಜ ಅನುಭವ ನೀಡುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಹತ್ವಾಕಾಂಕ್ಷಿ ಯೋಜನೆಯಾದ ಗ್ರಾಮಾನುಭವ' ಕಾರ್ಯಕ್ರಮಕ್ಕೆ ಭಾನುವಾರ ಚಾಲನೆ ದೊರೆಯಲಿದೆ.

ಕನ್ನಡ ರಾಜ್ಯೋತ್ಸವದ ದಿನವಾದ ನವೆಂಬರ್ 1ರ ಬೆಳಿಗ್ಗೆ 8 ಗಂಟೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗ್ರಾಮಾನುಭವ ಯೋಜನೆಗೆ ಚಾಲನೆ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಏಕಕಾಲಕ್ಕೆ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತಿದೆ.

ಕಾರ್ಯಕ್ರಮದ ಮುಖ್ಯ ಉದ್ದೇಶ

ನಗರ ಪ್ರದೇಶದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 8, 9 ಮತ್ತು 11ನೇ ತರಗತಿಯ ವಿದ್ಯಾರ್ಥಿಗಳಿಗೆ ಈ ಯೋಜನೆಯನ್ನು ತಲುಪಿಸಲಾಗುತ್ತಿದೆ. ತರಗತಿಯ ಕಲಿಕೆಯನ್ನು ಗ್ರಾಮೀಣ ಸಮುದಾಯದ ನೈಜ ಜೀವನದೊಂದಿಗೆ ಬೆಸೆಯುವುದು ಇದರ ಪ್ರಮುಖ ಉದ್ದೇಶವಾಗಿದೆ. ಶೈಕ್ಷಣಿಕ ಭೇಟಿಗಳ ಮೂಲಕ ವಿದ್ಯಾರ್ಥಿಗಳು ರೈತರು, ಕುಶಲಕರ್ಮಿಗಳು, ಪಶುಸಂಗೋಪನೆದಾರರು ಹಾಗೂ ಗ್ರಾಮೀಣ ಉದ್ಯಮಿಗಳೊಂದಿಗೆ ನೇರವಾಗಿ ಸಂವಾದ ನಡೆಸಿ ಕಲಿಯಲಿದ್ದಾರೆ.

ಈ ಕಾರ್ಯಕ್ರಮವು ಮಕ್ಕಳಲ್ಲಿ ಶ್ರಮದ ಘನತೆ, ರೈತರ ಬಗ್ಗೆ ಗೌರವ, ಕೃಷಿ, ಸಾಂಪ್ರದಾಯಿಕ ಜ್ಞಾನ, ಸ್ಥಳೀಯ ಸಂಸ್ಕೃತಿ ಮತ್ತು ಸುಸ್ಥಿರ ಜೀವನಶೈಲಿಯ ಅರಿವನ್ನು ಮೂಡಿಸಲಿದೆ.

ಕರ್ನಾಟಕದ ಅಭಿವೃದ್ಧಿಯಲ್ಲಿ ಹಳ್ಳಿಗಳ ಪಾತ್ರವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವ ಹಾಗೂ ಕಲಿಕೆಯನ್ನು ಹೆಚ್ಚು ಅನುಭವಾಧಾರಿತ ಮತ್ತು ಅರ್ಥಪೂರ್ಣವಾಗಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ದಲಿತ ಮುಖಂಡ ಧರ್ಮಸ್ಥಳದಲ್ಲಿ ಶವವಾಗಿ ಪತ್ತೆ

ಉದಯಕಾಲ ನ್ಯೂಸ್, ದೊಡ್ಡಬಳ್ಳಾಪುರ: ಧರ್ಮಸ್ಥಳದ ಶ್ರೀಮುಡಿ ಭವನದ ವರಾಂಡದಲ್ಲಿ 55 ವರ್ಷದ ವ್ಯಕ್ತಿಯೊಬ್ಬರ ಶವ ಪತ್ತೆಯಾಗಿದ್ದು, ಮೃತರನ್ನು ದೊಡ್ಡಬಳ್ಳಾಪುರದ ಕಚೇರಿಪಾಳ್ಯದ ನಿವಾಸಿ, ದಲಿತ ಮುಖಂಡ ಹಾಗೂ ಸಾಮಾಜಿಕ ಹೋರಾಟಗಾರ ಗುರುರಾಜಪ್ಪ ಎಂದು ಗುರುತಿಸಲಾಗಿದೆ.



ಧರ್ಮಸ್ಥಳದ ಪೊಲೀಸರ ಪ್ರಾಥಮಿಕ ಮಾಹಿತಿಯ ಪ್ರಕಾರ, ಅನಾರೋಗ್ಯ ಅಥವಾ ಇತರ ಕಾರಣಗಳಿಂದ ಅವರು ಮಲಗಿದ್ದ ಸ್ಥಳದಲ್ಲೇ ಮೃತಪಟ್ಟಿರುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ. ದೊಡ್ಡಬಳ್ಳಾಪುರದ ಕಚೇರಿಪಾಳ್ಯದ ನಿವಾಸಿಯಾಗಿದ್ದ ಗುರುರಾಜಪ್ಪ ಅವರು ಎರಡು ದಿನಗಳ ಹಿಂದೆ ತಮ್ಮ ಬೈಕ್‌ನಲ್ಲಿ ಮನೆಯಿಂದ ಹೊರಟಿದ್ದರು. ಬಳಿಕ ಅವರ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿದ್ದು, ಕುಟುಂಬಸ್ಥರಿಗೆ ಸಂಪರ್ಕಕ್ಕೆ ಸಿಗದೆ ನಾಪತ್ತೆಯಾಗಿದ್ದರು. ಈ ಹಿನ್ನೆಲೆಯಲ್ಲಿ ಶನಿವಾರ ಬೆಳಿಗ್ಗೆ ಕುಟುಂಬಸ್ಥರು ದೊಡ್ಡಬಳ್ಳಾಪುರ ನಗರ ಪೊಲೀಸ್ ಠಾಣೆಗೆ ತೆರಳಿ ನಾಪತ್ತೆ ಪ್ರಕರಣ ದಾಖಲಿಸಲು ಮುಂದಾಗಿದ್ದರು. ಇದೇ ಸಂದರ್ಭದಲ್ಲಿ ಧರ್ಮಸ್ಥಳದ ಶ್ರೀಮುಡಿ ಭವನದ ವರಾಂಡದಲ್ಲಿ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿರುವ ಮಾಹಿತಿ ಕುಟುಂಬಸ್ಥರಿಗೆ ಲಭಿಸಿದೆ. ಮೃತ ವ್ಯಕ್ತಿಯ ದೇಹದ ಗುರುತು ಹಾಗೂ ಇತರ ವಿವರಗಳನ್ನು ಪರಿಶೀಲಿಸಿದಾಗ, ನಾಪತ್ತೆಯಾಗಿದ್ದ ಗುರುರಾಜಪ್ಪ ಅವರೇ ಮೃತಪಟ್ಟಿರುವುದು ದೃಢಪಟ್ಟಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಗುರುರಾಜಪ್ಪ ಅವರ ಸಾವಿಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ಸಾವಿನ ನಿಖರ ಕಾರಣ ತಿಳಿಯಲಿದೆ.

ಕೇಂದ್ರದ ವಿರುದ್ಧ ಕಬ್ಬು ಬೆಳೆಗಾರರ ಹೋರಾಟಕ್ಕೆ ಬೆಂಬಲ

ಉದಯಕಾಲ ನ್ಯೂಸ್, ಬೆಂಗಳೂರು: ಕಬ್ಬು ಬೆಳೆಗಾರರು ನ್ಯಾಯಸಮ್ಮತ ಮತ್ತು ಲಾಭದಾಯಕ (ಎಫ್.ಆರ್.ಪಿ.) ದರ ಘೋಷಣೆಗೆ ಒತ್ತಾಯಿಸಿ ಕೇಂದ್ರದ ವಿರುದ್ಧ ನಡೆಸುತ್ತಿರುವ ಹೋರಾಟಕ್ಕೆ ನಮ್ಮ ಬೆಂಬಲ ಇದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.



ಬೆಂಗಳೂರಿನಲ್ಲಿ ಮಾತನಾಡಿದ ಅವರು, ಸಕ್ಕರೆ ಕಾರ್ಖಾನೆಗಳೂ ಉಳಿಯಬೇಕು, ಅದೇ ರೀತಿ ರೈತರಿಗೂ ಲಾಭದಾಯಕ ಬೆಲೆ ದೊರಕಬೇಕು, ಆದರೆ ಕೇಂದ್ರ ಸರ್ಕಾರ ಈ ಬಗ್ಗೆ ಚಿಂತನೆಯನ್ನೇ ಮಾಡುತ್ತಿಲ್ಲ ಎಂದರು. ಕಬ್ಬಿನ ದರ ಹೆಚ್ಚಳ ಮಾಡಿದರೆ, ಸಕ್ಕರೆ ದರ ಏರುತ್ತದೆ. ಈಗಾಗಲೆ ಡೀಸೆಲ್, ಪೆಟ್ರೋಲ್, ಅಕ್ಕಿ, ಗೋಧಿ, ಬೇಳೆ, ರಸಗೊಬ್ಬರ ಸೇರಿದಂತೆ ಎಲ್ಲ ಅಗತ್ಯ ವಸ್ತುಗಳ ಬೆಲೆಯನ್ನು ಹೆಚ್ಚಳ ಮಾಡಿರುವ ಕೇಂದ್ರ ಸರ್ಕಾರ ಕಬ್ಬಿನ ಎಫ್.ಆರ್.ಪಿ. ದರ ಹೆಚ್ಚಿಸಬೇಕು, ಬಡ ಜನರಿಗೆ ರಿಯಾಯಿತಿ ದರದಲ್ಲಿ ಪಡಿತರ ಸಕ್ಕರೆ ವಿತರಿಸಬೇಕು ಎಂದು ಹೇಳಿದರು.

ಎಥನಾಲ್ ಉಪಯೋಗದಿಂದ ತೈಲ ಕಂಪನಿಗಳಿಗೆ ಲಾಭವಾಗುತ್ತಿದೆ. ಆದರೆ ರೈತರಿಗೆ ಲಾಭವಾಗುತ್ತಿಲ್ಲ. ರೈತರ ಹಿತ ಕಾಪಾಡಬೇಕಾದ್ದು, ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಬೇಕಾದ್ದು ಕೇಂದ್ರ ಸರ್ಕಾರದ ಕರ್ತವ್ಯ. ರಾಜ್ಯ ಸರ್ಕಾರ ರೈತರಿಗೆ ಎಲ್ಲ ರೀತಿಯ ಬೆಂಬಲ, ಸಹಕಾರ ನೀಡುತ್ತಿದೆ ಎಂದರು.

ಸ್ಥಳೀಯ ಸಂಸ್ಥೆಗಳಿಗೆ ಶೀಘ್ರ ಅಧಿಸೂಚನೆ: ಈಶ್ವರ ಖಂಡ್ರೆ

ಉದಯಕಾಲ ನ್ಯೂಸ್, ಬೆಂಗಳೂರು: ರಾಜ್ಯ ಸರ್ಕಾರ ಅಧಿಕಾರ ವಿಕೇಂದ್ರೀಕರಣದ ಪರವಾಗಿದ್ದು, ಗ್ರಾಮೀಣ ಸ್ಥಳೀಯ ಸಂಸ್ಥೆ ಚುನಾವಣೆಗೆ ಕರಡು ಮೀಸಲು ಅಧಿಸೂಚನೆ ಹೊರಡಿಸಿದೆ. ಬರುವ ಜನವರಿಯೊಳಗೆ ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿ ಚುನಾವಣೆಗಳು ನಡೆದೇ ನಡೆಯುತ್ತವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅ.19ರವರೆಗೆ ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಸುಮಾರು 2 ಸಾವಿರಕ್ಕೂ ಅಧಿಕ ಆಕ್ಷೇಪಣೆ ಬಂದಿದ್ದು, ಅಧಿಕಾರಿಗಳು ನಿಯಮಾನುಸಾರ ಪರಿಶೀಲನೆ ಮಾಡುತ್ತಿದ್ದು, ಶೀಘ್ರವೇ ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ ಎಂದರು.

ರಾಜ್ಯ ಸರ್ಕಾರ ಪ್ರಸ್ತಾವನೆ ಸಲ್ಲಿಸಿದ ತರುವಾಯ ರಾಜ್ಯ ಚುನಾವಣೆ ಆಯೋಗ, ಕೇಂದ್ರ ಚುನಾವಣೆ ಆಯೋಗದಿಂದ ಮತದಾರರ ಪಟ್ಟಿ ಪಡೆದು ಅಥವಾ ತನ್ನಲ್ಲಿರುವ ಮತದಾರರ ಪಟ್ಟಿಯನ್ನೇ ಪರಿಷ್ಕರಿಸಿ ಚುನಾವಣೆ ನಡೆಸುವ ಕುರಿತಂತೆ ಕ್ರಮ ವಹಿಸಲಿದೆ ಎಂದರು.

ಹಿರಿಯೂರು ಉಪ ಚುನಾವಣೆಗೆ ಕಾಂಗ್ರೆಸ್ ಸಜ್ಜು

ಬೆಂಗಳೂರು: ಸುಧಾಕರ್ ಅವರ ನಿಧನದಿಂದ ತೆರವಾಗಿರುವ ಹಿರಿಯೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಎದುರಿಸಲು ಕಾಂಗ್ರೆಸ್ ಪಕ್ಷ ಸಂಪೂರ್ಣ ಸಜ್ಜಾಗಿದೆ ಎಂದು ಖಂಡ್ರೆ ಹೇಳಿದ್ದಾರೆ. ಕೇಂದ್ರ ಚುನಾವಣಾ ಆಯೋಗ ಇನ್ನೂ ವೇಳಾಪಟ್ಟಿ, ಚುನಾವಣೆ ದಿನಾಂಕ ಪ್ರಕಟಿಸಿಲ್ಲ, ಯಾರನ್ನೂ ಕಣಕ್ಕಿಳಿಸಬೇಕು ಎಂಬ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನಿಸಲಿದ್ದಾರೆ. ಯಾವಾಗ ಚುನಾವಣೆ ನಡೆಸಿದರೂ ಎದುರಿಸಲು ನಾವು ಸಿದ್ಧ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದೇ ಗೆಲ್ಲುತ್ತದೆ ಎಂದರು.

ಹಿರಿಯ ನಟ ದತ್ತಣ್ಣಗೆ ಒಲಿದ ಕನ್ನಡ ಭಾರತೀಯ ರಂಗ ಪ್ರಶಸ್ತಿ

ಬೆಂಗಳೂರು: ದೆಹಲಿ ಕರ್ನಾಟಕ ಸಂಘವು ಪ್ರತಿ ವರ್ಷ ರಂಗಭೂಮಿ ಕ್ಷೇತ್ರದಲ್ಲಿ ಮಹತ್ತರ ಸೇವೆ ಸಲ್ಲಿಸಿದ ಕಲಾವಿದರನ್ನು ಗುರುತಿಸಿ ನೀಡುವ ಪ್ರತಿಷ್ಠಿತ 'ಕನ್ನಡ ಭಾರತೀ ರಂಗ ಪ್ರಶಸ್ತಿ'ಯನ್ನು 2026ನೇ ಸಾಲಿಗೆ ಖ್ಯಾತ ರಂಗಭೂಮಿ ಹಾಗೂ ಚಲನಚಿತ್ರ ನಟರಾದ ಶ್ರೀ ಹೆಚ್.ಜಿ. ದತ್ತಾತ್ರೇಯ (ದತ್ತಣ್ಣ) ಅವರಿಗೆ ನೀಡಲು ಸಂಘದ ಕಾರ್ಯಕಾರಿ ಸಮಿತಿಯು ತೀರ್ಮಾನಿಸಿದೆ. ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿ : ರಂಗಭೂಮಿ ಕ್ಷೇತ್ರದಲ್ಲಿ ಮಹತ್ತರವಾದ ಸೇವೆಯನ್ನು ಸಲ್ಲಿಸಿದವರನ್ನು ಗುರುತಿಸಿ ನೀಡುವ ವಾರ್ಷಿಕ ಪ್ರಶಸ್ತಿ ಇದಾಗಿದೆ. 2015ರಲ್ಲಿ ಮೊದಲ ಪ್ರಶಸ್ತಿಯನ್ನು 'ಕನ್ನಡ ಭಾರತಿ'ಯ ಸಂಸ್ಥಾಪಕ ಸದಸ್ಯರಲ್ಲೊಬ್ಬರಾದ ರಂಗಕರ್ಮಿ ಎಂ.ವಿ. ನಾರಾಯಣರಾವ್, 2016ರಲ್ಲಿ ಸರೋಜಿನಿ ಶೆಟ್ಟಿ, 2017ರಲ್ಲಿ ಸುರೇಶ್ ಆನಗಳ್ಳಿ, 2021ರಲ್ಲಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, 2022ರಲ್ಲಿ ಶ್ರೀನಿವಾಸ ಜಿ. ಕಪ್ಪಣ್ಣ, 2023ರಲ್ಲಿ ಎಸ್. ದೊಡ್ಡಣ್ಣ, 2024ರಲ್ಲಿ ಡಾ. ಟಿ.ಎಸ್. ನಾಗಾಭರಣ, 2025ರಲ್ಲಿ ಚರಣ್ ರಾಜ್ ಅವರಿಗೆ ನೀಡಿ ಗೌರವಿಸಲಾಗಿರುತ್ತದೆ. ಪ್ರಸ್ತುತ 2026ನೇ ಸಾಲಿನ ಈ ಪ್ರಶಸ್ತಿಯನ್ನು ರಂಗ ಕಲಾವಿದ, ಚಿತ್ರ ನಟ ದತ್ತಣ್ಣ ಅವರಿಗೆ ಪ್ರದಾನ ಮಾಡಲಾಗುವುದು. ಈ ಪ್ರಶಸ್ತಿಯು ತಲಾ ರೂ. 50,000/– ನಗದು, ಸ್ಮರಣಿಕೆ ಮತ್ತು ದೆಹಲಿಗೆ ಬಂದು ಹೋಗುವ ವಿಮಾನಯಾನ ವೆಚ್ಚವನ್ನು ಒಳಗೊಂಡಿರುತ್ತದೆ.

ಕೆನರಾ ಬ್ಯಾಂಕ್ Canara Bank (ಭಾರತ ಸರ್ಕಾರದ ಒಂದು ಉದ್ಯಮ)

ಎಆರ್‌ಎಂ–II ಶಾಖೆ
2ನೇ ಮಹಡಿ, ಸರ್ಕಲ್ ಆಫೀಸ್, ಸ್ಪೆನ್ಸರ್ ಟವರ್ಸ್, ನಂ.86, ಎಂ ಜಿ ರಸ್ತೆ, ಬೆಂಗಳೂರು–560001.
ದೂರವಾಣಿ: 080–25310099, 080–25310181, ಇ–ಮೇಲ್ – cb6298@canarabank.com

ಸಾಲಗಾರರು/ಜಾಮೀನುದಾರರು/ಅಡಮಾನದಾರರಿಗೆ ತಗಾದೆ ಸೂಚನೆ [ಸೆಕ್ಷನ್ 13(2)]

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೆಕ್ಷನ್ 13(2)ರನ್ನು ಓದಿಕೊಂಡಂತೆ ನೋಟೀಸು

ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ, ಆದ ನಾವು ಕೆಳಕಂಡ ನಿಮಗೆ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೆಕ್ಷನ್ 13(2)ರ ಅನ್ವಯ ಡಿಮ್ಯಾಂಡ್ ನೋಟೀಸ್‌ನ ನೀಡಿಕೆಯನ್ನು ತಪ್ಪಿಸಿಕೊಂಡಿರುವುದರಿಂದ, ಬ್ಯಾಂಕ್ ಡಿಮ್ಯಾಂಡ್ ನೋಟೀಸ್‌ಗಳನ್ನು ನಿಮ್ಮ ಸಂಬಂಧಪಟ್ಟ ವಿಳಾಸಗಳಿಗೆ ನೋಂದಾಯಿತ ಅಂಚೆ ಎ.ಡಿ. ಮೂಲಕ ಕೆಳಗೆ ತಿಳಿಸಿರುವ ದಿನಾಂಕದಂದು ಸ್ವೀಕೃತಿ ಕಳುಹಿಸಲಾಗಿತ್ತು. ಆದರೆ ಇವುಗಳು ನಿಮಗೆ ನೀಡಿಕೆಯಾಗದೆ ಹಿಂದಕ್ಕೆ ಬಂದಿವೆ. ನಿಮಗೆ ಮಂಜೂರು ಮಾಡಿದ್ದ ಸಾಲಗಳನ್ನು ಮರುಪಾವತಿ ಮಾಡಲು ತಪ್ಪಿತಸ್ಥರಾಗಿರುವುದು ಸದರಿ ನೋಟೀಸುಗಳ ಒಕ್ಕಣೆಯಾಗಿರುವುದು. ಸಾಲದ ವಿವರಗಳು ಮತ್ತು ಬಾಕಿಯಿರುವ ಮೊತ್ತ ಕೆಳಕಂಡಂತಿರುವುದು.

1. ಸಾಲಗಾರರ / ಸಹ ಸಾಲಗಾರರ / ಅಡಮಾನದಾರರ / ಜಾಮೀನುದಾರರ ಹೆಸರು ಮತ್ತು ವಿಳಾಸ : (1) **ಶ್ರೀಮತಿ. ಪದ್ಮಾವತಿ** ಸಿ ಕೋಂ ಉಮೇಶ್ ಬಿ, ನಂ.277, 5ನೇ ಮುಖ್ಯ, 1ನೇ ಸಿ ಕ್ರಾಸ್, ರೆಮ್ಕೋ ಲೇಔಟ್, ವಿಜಯನಗರ, ಬೆಂಗಳೂರು–560040 (2) **ಶ್ರೀಮತಿ. ಪದ್ಮಾವತಿ** ಸಿ ಕೋಂ ಉಮೇಶ್ ಬಿ ನಂ.176/1, 6ನೇ ಮುಖ್ಯ, 10ನೇ ಕ್ರಾಸ್, ಉಳ್ಳಾಲ ಮುಖ್ಯರಸ್ತೆ, ಜ್ಞಾನಜ್ಯೋತಿ ನಗರ, ಜ್ಞಾನಭಾರತಿ ನಗರ, ಬೆಂಗಳೂರು–560056 (3) **ಶ್ರೀಮತಿ. ಪದ್ಮಾವತಿ** ಸಿ ಕೋಂ ಉಮೇಶ್ ಬಿ, ನಂ.1964/ಎ, ಇಜೂರ್, ಮಾಗಡಿ ರಸ್ತೆ, ಕೆಂಪಗೌಡ ವೃತ್ತದ ಹತ್ತಿರ, ರಾಮನಗರ, ಕರ್ನಾಟಕ–562159 (4) **ಶ್ರೀ ಉಮೇಶ್ ಬಿ** ಬಿನ್ ಬಸವಾಚಾರ್, ನಂ.277, 5ನೇ ಮೇನ್, 1ನೇ ಸಿ ಕ್ರಾಸ್, ರೆಮ್ಕೋ ಲೇಔಟ್, ವಿಜಯನಗರ, ಬೆಂಗಳೂರು–560040 (5) **ಶ್ರೀ.ಉಮೇಶ್ ಬಿ ಬಿನ್ ಬಸವಾಚಾರ್,** ನಂ.1964/ಎ, ಇಜೂರ್, ಮಾಗಡಿ ರಸ್ತೆ, ಕೆಂಪೇಗೌಡ ವೃತ್ತದ ಹತ್ತಿರ, ರಾಮನಗರ, ಕರ್ನಾಟಕ–562159.

[ಸಾಲಗಾರರು ಪಡೆದ ಸಾಲ ಸೌಲಭ್ಯಗಳ ವಿವರಗಳು]

Sl. No.	Nature of Loan/ Limit	Date of Sanction	Sanctioned Amount (Rs.)	Disbursed Amount (Rs.)	Total Liability as on 30.10.2026	Rate of Interest
1.	Housing Loan 0427973 0000083	30.05.2017	Rs. 1,32,75,000/-	Rs. 1,32,75,000/-	Rs. 1,22,92,711.81	8.75% +2 % penalty

ಬರಬೇಕಾದ ಒಟ್ಟು ಮೊತ್ತ : ರೂ. 1,22,92,711.81 (ರೂಪಾಯಿ ಒಂದು ಕೋಟಿ ಇಪ್ಪತ್ತೆರಡು ಲಕ್ಷದ ತೊಂಭತ್ತೆರಡು ಸಾವಿರದ ಏಳುನೂರ ಹನ್ನೊಂದು ಮತ್ತು ಎಂಭತ್ತೊಂದು ಪೈಸೆ ಮಾತ್ರ) ದಿನಾಂಕ: 30.10.2026 ರಂತೆ ಜೊತೆಗೆ ಹೆಚ್ಚಿನ ಬಡ್ಡಿ ಮತ್ತು ಪ್ರಾಸಂಗಿಕ ಖರ್ಚು ವೆಚ್ಚಗಳು.
ಎನ್‌ಪಿಎ ದಿನಾಂಕ : 03.05.2025 ಡಿಮ್ಯಾಂಡ್ ನೋಟೀಸ್ ದಿನಾಂಕ : 31.10.2026

ಭದ್ರತಾ ಆಸ್ತಿಯ ವಿವರ :
ಮಾಲೀಕರು : ಶ್ರೀಮತಿ. ಪದ್ಮಾವತಿ ಸಿ ಮತ್ತು ಶ್ರೀ. ಉಮೇಶ್.ಬಿ.
ಸ್ಥಿರಾಸ್ತಿ : ಷೆಡ್ಯೂಲ್ ಎ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ದಕ್ಷಿಣ ಭಾಗದ ನಿವೇಶನ ನಂ. 176, ಬಿಬಿಎಂಪಿ ಖಾತಾ ನಂ. 163/161/49/68/5/176/1, ಮಲ್ಲತ್ತಹಳ್ಳಿ, ಬೆಂಗಳೂರು ಹಿಂದಿನ ದಕ್ಷಿಣ ಭಾಗದ ನಿವೇಶನ ನಂ. 176, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮಲ್ಲತ್ತಹಳ್ಳಿ ಗ್ರಾಮದ ಸರ್ವೆ ನಂ. 68/5 ಮತ್ತು 67 ಎಲ್ಲಿ ರೂಪುಗೊಂಡಿದ್ದು, ಪ್ರಸ್ತುತ ಬಿಬಿಎಂಪಿ ವಾರ್ಡ್ ನಂ. 129, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 48 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 26 ಅಡಿ, ಒಟ್ಟು 1248 ಚದರ ಅಡಿ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ನಂ. 175, ಉತ್ತರಕ್ಕೆ : ನಿವೇಶನ ನಂ. 176ರ ಉಳಿಕೆ ಭಾಗ, ದಕ್ಷಿಣಕ್ಕೆ : ರಸ್ತೆ.

ಸದರಿ ನೋಟೀಸ್ ಪ್ರಕಟವಾದ ದಿನಾಂಕದಿಂದ 60 ದಿನಗಳ ಒಳಗೆ ಮೇಲೆ ತಿಳಿಸಿರುವ ಸಂಬಂಧಪಟ್ಟ ಮೊತ್ತಗಳನ್ನು **ಕೆನರಾ ಬ್ಯಾಂಕ್‌ಗೆ** ಪಾವತಿ ಮಾಡುವಂತೆ ಮತ್ತು ಇದಕ್ಕೆ ತಪ್ಪಿದ್ದಲ್ಲಿ ಸಾಲಗಾರರು ಮತ್ತು ಆಧಾರದಾರರ ಭದ್ರತಾ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಸೇರಿದಂತೆ, ಸದರಿ ಅಧಿನಿಯಮದ ಉಪಬಂಧಗಳ ಅನ್ವಯ ಭದ್ರತಾಸ್ವತ್ತುಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ನಿಮಗೆ ಈ ಮೂಲಕ ಕರೆ ನೀಡಲಾಗಿದೆ. ಅಧಿನಿಯಮದ ಅನ್ವಯ **ಕೆನರಾ ಬ್ಯಾಂಕಿಗೆ** ದೊರೆಯುವ ಅಧಿಕಾರಗಳಲ್ಲಿ ಇವು ಒಳಗೊಂಡಿರುತ್ತವೆ. (1) ಗುತ್ತಿಗೆ, ನಿಯೋಜಿತ ಮಾರಾಟ ಮತ್ತು ಭದ್ರತೆಯುಳ್ಳ ಸ್ವತ್ತುಗಳನ್ನು ಪಡೆಯುವಿಕೆ ಮೂಲಕ ವರ್ಗಾವಣೆ ಹಕ್ಕುಗಳು ಸೇರಿದಂತೆ ಸಾಲಗಾರರು / ಜಾಮೀನುದಾರರು / ಅಡಮಾನುದಾರರು ಭದ್ರತೆ **ಕೆನರಾ ಬ್ಯಾಂಕ್,** ಭದ್ರತೆಯುಳ್ಳ ಸ್ವತ್ತುಗಳ ವರ್ಗಾವಣೆಯ ಸಂಬಂಧದಲ್ಲಿ ಅಥವಾ ಅದರಲ್ಲಿ ವರ್ಗಾವಣೆ ಪಡೆದವರಿಗೆ ವರ್ಗಾವಣೆಯನ್ನು ನೀವೇ ಮಾಡಿರುವಿರಿ ಎಂಬ ಎಲ್ಲಾ ಹಕ್ಕುಗಳನ್ನು ಹೊಂದಿರುವರು. ಡಿಮ್ಯಾಂಡ್ ನೋಟೀಸ್‌ನಲ್ಲಿ ತಿಳಿಸಿರುವ ಯಾವುದೇ ಭದ್ರತಾಸ್ವತ್ತುಗಳನ್ನು ಹಾಗೂ ಬ್ಯಾಂಕಿಗೆ ಈಡು ಮಾಡಿರುವ / ಆಧಾರ ಮಾಡಿರುವ ಸ್ವತ್ತುಗಳನ್ನು, ಬ್ಯಾಂಕಿನ ಪೂರ್ವಾನುಮತಿ ಪಡೆಯದೆ ಮಾರಾಟ, ಗುತ್ತಿಗೆ ಅಥವಾ ಇನ್ನಿತರೆ ರೂಪದಲ್ಲಿ (ನಿಮ್ಮ ವ್ಯವಹಾರದ ಸಾಮಾನ್ಯ ವಿಧಾನದ ಹೊರತಾಗಿ) ವರ್ಗಾವಣೆ ಮಾಡದಂತೆ ಸದರಿ ಅಧಿನಿಯಮದ ಪ್ರಕರಣ 13(13) ರ ಉಪಬಂಧಗಳ ಅನ್ವಯ ಈ ಮೂಲಕ ನಿಮ್ಮನ್ನು ನಿಷೇಧಿಸಿದೆ. ಸದರಿ ಅಧಿನಿಯಮದ ಪ್ರಕರಣ 13(2) ರ ಅನ್ವಯ ಈ ನೋಟೀಸನ್ನು ನೀಡಿದೆ.

ದಿನಾಂಕ: 31.10.2026 ಸಹಿ/– ಅಧಿಕೃತ ಅಧಿಕಾರಿ
ಸ್ಥಳ: ಬೆಂಗಳೂರು ಕೆನರಾ ಬ್ಯಾಂಕ್

बैंक ऑफ़ बड़ौदा Bank of Baroda

ಬ್ಯಾಂಕ್ ಆಫ್ ಬರೋಡ

ವಾಹನಗಳ ಹರಾಜು ಮಾರಾಟ

ವಸೂಲಾತಿ ವಿಭಾಗ, ಪ್ರಾದೇಶಿಕ ಕಚೇರಿ –ಬೆಂಗಳೂರು ಕೇಂದ್ರ, 41/2, 5ನೆ ಮಹಡಿ, ವಿಜಯ ಟವರ್ಸ್,ಟ್ರಿನಿಟಿ ಸರ್ಕಲ್, ಎಂ. ಜಿ. ರಸ್ತೆ, ಬೆಂಗಳೂರು, ಕರ್ನಾಟಕ– 560 001 E Mail : recovery.blrcentral@bankofbaroda.bank.in

ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲರಿಗೆ ಮತ್ತು ಜಾಮೀನುದಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ ಬ್ಯಾಂಕ್ ಆಧಾರ / ಸಾಲದ ಒಪ್ಪಂದದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಆಧಾರ ಮಾಡಿರುವ ಈ ಕೆಳಕಂಡ ವಾಹನಗಳನ್ನು ಮರು ಸ್ವಾಧೀನ/ವಶಪಡಿಸಿಕೊಂಡಿದೆ. ಮತ್ತು ಈ ಕೆಳಗೆ ತಿಳಿಸಿದ ಖಾತೆಗಳಲ್ಲಿನ ಬಾಕಿಗಳನ್ನು ವಸೂಲಿ ಮಾಡಲು 'ಎಲ್ಲಿದೆಯೋ ಹಾಗೆ', 'ಏನಿದೆಯೋ ಹಾಗೆ' ಮತ್ತು 'ಮತ್ಯಾವುದಾದರೂ ಅಲ್ಲಿ ಇದ್ದಲ್ಲಿ' ಆಧಾರದ ಮೇಲೆ ಮಾರಾಟ ಮಾಡಲಾಗುವುದು.
ಸಾಲಗಾರರ/ಜಾಮೀನುದಾರರ / ವಾಹನಗಳ /ಬಾಕಿ ಮೊತ್ತ / ಮೀಸಲು ಬೆಲೆ/ ಇಎಂಡಿ ಮತ್ತು ಬಿಡ್‌ಗುಣಾಂಕ/ ಇ–ಹರಾಜು ಮಾರಾಟದ ದಿನಾಂಕ ಮತ್ತುಸಮಯದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ ಸಂ	ಬ್ಯಾಂಕ್ ಆಫ್ ಬರೋಡಾ ಶಾಖೆ ಸಾಲಗಾರರ/ ಜಾಮೀನುದಾರರ ಹೆಸರು/ ಶಾಖೆಯ ಸಂಪರ್ಕಿಸುವ ಸಂಖ್ಯೆ	ಅಕೌಂಟ್ ನಂಬರ್ ಒಟ್ಟು ಬಾಕಿ	ವಾಹನದ ತಯಾಕರು ಮತ್ತು ಮಾಡೆಲ್ ಆರ್‌ಟಿಒ ನೋಂದಣಿ ಸಂಖ್ಯೆ	1. ಮೀಸಲು ಬೆಲೆ 2. ಮುಂಗಡ ಠೇವಣಿ (ಇಎಂಡಿ) 3. ಬಿಡ್ ಗುಣಾಂಕ	ಇ ಹರಾಜಿನ ದಿನಾಂಕ ಇ– ಹರಾಜಿನ ಸಮಯ ಪ್ರಾರಂಭದಿಂದ ಅಂತಿಮ ಸಮಯ 2. ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 3. ವಾಹನ/ಚರ ಸ್ವತ್ತುಗಳ ವೀಕ್ಷಣಾ ದಿನಾಂಕ ಮತ್ತು ಸಮಯ
1	ಬೆಳ್ಳಂದೂರು ಶಾಖೆ ಶ್ರೀ ಅಂಕುರ್ ಜೈಸ್ವಾಲ್ ಫೋನ್ ನಂ.080-25740621	74600600002351 ರೂ.24,05,096/– ದಿನಾಂಕ 21.09.2025 (ಸದರಿ ಮೊತ್ತವು ದಿನಾಂಕ 21.09.2025ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	MAHINDRA SCORPIO-N 2023 KA 03 NR 7435	Rs.15,87,600/- Rs.1,58,760/- Rs. 5,000/-	23.11.2026 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ ಇ– ಹರಾಜಿನ ಅಂತ್ಯದ ಮೊದಲು ದಿನಾಂಕ 16.11.2026ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
2	ಶಾಂತಿನಗರ ಶಾಖೆ ಶ್ರೀ ರಾಜೇಶ್ ಲಾಲ್ವಾನಿ ಫೋನ್ ನಂ.080-22221504	73960600003771 ರೂ.18,30,326/– ದಿನಾಂಕ 13.07.2026 (ಸದರಿ ಮೊತ್ತವು ದಿನಾಂಕ 12.07.2026ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	KIA SELTOS 2024 KA 05 NL 1653	Rs.16,02,000/- Rs.1,60,200/- Rs 5,000/-	23.11.2026 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ ಇ– ಹರಾಜಿನ ಅಂತ್ಯದ ಮೊದಲು ದಿನಾಂಕ 16.11.2026ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
3	ಶಾಂತಿನಗರ ಶಾಖೆ ಶ್ರೀ ಆನಂದ ಎಂ. ಫೋನ್ ನಂ.080-22221504	73960600001996 ರೂ.3,88,981/– ದಿನಾಂಕ 13.07.2026 (ಸದರಿ ಮೊತ್ತವು ದಿನಾಂಕ 12.07.2026ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	MARUTI SUZUKI EECO 2022 KA01MX2615	Rs.3,42,000/- Rs.34,200/- Rs 5,000/-	23.11.2026 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ ಇ– ಹರಾಜಿನ ಅಂತ್ಯದ ಮೊದಲು ದಿನಾಂಕ 16.11.2026ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
4	ಮಾರತ್‌ಹಳ್ಳಿ ಶಾಖೆ ಶ್ರೀ ರಂಜಿತ್ ಕುಮಾರ್ ಸಿ ಫೋನ್ ನಂ. 080-28543772	31930600003176 ರೂ.9,57,707/– ದಿನಾಂಕ 25.10.2026 (ಸದರಿ ಮೊತ್ತವು ದಿನಾಂಕ 25.10.2026ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	TATA NEXON 2022 KA03NL7345	Rs.6,80,400/- Rs.68,040/- Rs 5,000/-	23.11.2026 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ ಇ– ಹರಾಜಿನ ಅಂತ್ಯದ ಮೊದಲು ದಿನಾಂಕ 16.11.2026ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
5	ಓವರ್‌ಸೀಸ್ ಶಾಖೆ ಶ್ರೀ ಅಜೇಶ್ ಪಿಳ್ಳೈ ಫೋನ್ ನಂ. 080-24011354	67630600000747 ರೂ.12,12,094.75 ದಿನಾಂಕ 25.10.2026 (ಸದರಿ ಮೊತ್ತವು ದಿನಾಂಕ 25.10.2026ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	FORCE GURKHA 2022 KA 51 MR 7608	Rs.10,26,000/- Rs.1,02,600/- Rs 5,000/-	23.11.2026 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ ಇ– ಹರಾಜಿನ ಅಂತ್ಯದ ಮೊದಲು ದಿನಾಂಕ 16.11.2026ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
6	ಮೇಯೋಹಾಲ್ ಶಾಖೆ ಶ್ರೀ ಸಮೀರ್ ಪಟೇಲ್ ಫೋನ್ ನಂ. 080-25588936	73890600000170 ರೂ.21,72,183/– ದಿನಾಂಕ 21.10.2026 (ಸದರಿ ಮೊತ್ತವು ದಿನಾಂಕ 21.10.2026ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	HYUNDAI CRETA 1.6 VTVT SX(O), 2019 KA51MM6776	Rs.6,71,000/- Rs.67,100/- Rs 5,000/-	23.11.2026 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ ಇ– ಹರಾಜಿನ ಅಂತ್ಯದ ಮೊದಲು ದಿನಾಂಕ 16.11.2026ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
7	ಜೆ. ಸಿ. ರಸ್ತೆ ಶಾಖೆ ಕಲಾವತಿ ರಾಮಣ್ಣ ಫೋನ್ ನಂ. 080-22224835	73830600000323 ರೂ.7,19,157/– ದಿನಾಂಕ 29.10.2026 (ಸದರಿ ಮೊತ್ತವು ದಿನಾಂಕ 25.10.2026ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	TATA TIAGO 2017 KA05MV4336	Rs.2,88,000/- Rs.28,800/- Rs 5,000/-	23.11.2026 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ ಇ– ಹರಾಜಿನ ಅಂತ್ಯದ ಮೊದಲು ದಿನಾಂಕ 16.11.2026ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
8	ಬ್ರಿಗೇಡ್ ರಸ್ತೆ ಶಾಖೆ ಶ್ರೀ ತೌಸಿಫ್ ಅಹಮದ್ ಷರೀಫ್ ಫೋನ್ ನಂ. 080-25584066	06650600008511 ರೂ.93,09,969.75 ದಿನಾಂಕ 29.10.2026 (ಸದರಿ ಮೊತ್ತವು ದಿನಾಂಕ 25.10.2026ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	AUDI & AUDI S5 SB – BS6 KA03NV3818	Rs.75,40,000/- Rs.7,54,000/- Rs 50,000/-	05.12.2026 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ ಇ– ಹರಾಜಿನ ಅಂತ್ಯದ ಮೊದಲು ದಿನಾಂಕ 27.11.2026ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ

ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್‌ಗಳಲ್ಲಿ ಅಂದರೆ https://www.bankofbaroda.in and https://baanknet.com ನಲ್ಲಿ ವೀಕ್ಷಿಸಬಹುದು. ಮತ್ತು ಹೆಚ್ಚಿನ ವಿವರಗಳಿಗೆ ಸಂಭಾವ್ಯ ಬಿಡ್ದರ್‌ಗಳು ಸಂಬಂಧ ಪಟ್ಟ ಶಾಖೆಗಳನ್ನು ಸಂಪರ್ಕಿಸಬಹುದು.
ಸೂಚನೆ : ಬಿಡ್‌ದಾರರು ಮಾರಾಟ ಮೊತ್ತದ ಜೊತೆಗೆ ಅನ್ವಯವಾಗುವ ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಬ್ಯಾಂಕಿಗೆ ಪಾವತಿಸಬೇಕಾಗುತ್ತದೆ.

ದಿನಾಂಕ : 30.10.2026
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ

ಭಾರತೀಯ ಸ್ಟೇಟ್ ಬ್ಯಾಂಕ್

ಅಧಿಕೃತ ಅಧಿಕಾರಿಗಳ ವಿವರಗಳು:
ಹೆಸರು : ಶ್ರೀಮತಿ ಅನುಸೂಯ ರವಿ ಶೇಖರ್
ಇಮೇಲ್ ಐಡಿ: sbi.05173@sbi.co.in
ಮೊಬೈಲ್ ನಂ : 9550340218
ದೂರವಾಣಿ ಸಂಖ್ಯೆ (ಕಛೇರಿ) : 080-25943663

ಶಾಖೆಯ ವಿಳಾಸ :
ಒತ್ತಡಗ್ರಸ್ತ ಆಸ್ತಿ ವಸೂಲಿ ಶಾಖೆ, ಬೆಂಗಳೂರು
ನಂ. 11/90, 3ನೇ ಮಹಡಿ, ಹಳೆ ಶಿವಾಜಿ ಚಿತ್ರಮಂದಿರದ ಹತ್ತಿರ, ಜೆ.ಸಿ. ರಸ್ತೆ, ಬೆಂಗಳೂರು–560002.
ಸಂಪರ್ಕಿಸಿ : ಸಿಸಿಓ : ಕುಮಾರಿ ಪುಷ್ಪಾಮಿ ಪಿ ಜೆ
ಮೊಬೈಲ್ : 8095821810, ದೂರವಾಣಿ : 080-2594-3678/3663
ಇ–ಮೇಲ್ : sbi.05173@sbi.co.in.

ಅಪೆಂಡಿಕ್ಸ್ IV-A [ಪ್ರಾವಿಜೋ 6(2) & 9(1)ರ ಅಡಿಯಲ್ಲಿ]
ಸ್ಥಿರಾಸ್ತಿಯ ಇ–ಹರಾಜು ಮಾರಾಟಕ್ಕಾಗಿ ಸೂಚನೆ ದಿನಾಂಕ 19.11.2026
ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅಡಿಯಲ್ಲಿ ಮಾರಾಟಕ್ಕೆ ಶಾಸನಬದ್ಧ ಸೂಚನೆ
ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯೂರಿಟಿ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 6(2) ಮತ್ತು 9(1) ರ ನಿಬಂಧನೆಗಳನ್ನು ಓದಿಕೊಂಡಂತೆ ಇದರನ್ವಯ ಚರಾಸ್ತಿಯ ಇ–ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ/ಅಡಮಾನುದಾರರಿಗೆ/ಜಾಮೀನುದಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಈ ಕೆಳಗೆ ವಿವರಿಸಿರುವ ಭದ್ರತಾ ಸಾಲದಾತರಿಗೆ ಅಡಮಾನ/ ಚಾರ್ಜ್ / ಹೈಪೊಥಿಕೇಟೆಡ್ ಮಾಡಿರುವ ಆಸ್ತಿಯನ್ನು **ಭಾರತೀಯ ಸ್ಟೇಟ್ ಬ್ಯಾಂಕ್, ಎಸ್‌ಎಆರ್‌ಬಿ, ಬೆಂಗಳೂರು** ಭದ್ರತಾ ಸಾಲ ಕೊಟ್ಟವರು ಇವರ ಅಧಿಕೃತ ಅಧಿಕಾರಿಯವರು **ಭೌತಿಕವಾಗಿ** ಸ್ವಾಧೀನಪಡಿಸಿಕೊಂಡಿದ್ದು ಅವುಗಳನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" ಆಧಾರದ ಮೇಲೆ ಭದ್ರತಾ ಸಾಲ ಕೊಟ್ಟ ಭಾರತೀಯ ಸ್ಟೇಟ್ ಬ್ಯಾಂಕ್ ಇವರಿಗೆ **ಸಾಲಗಾರರು : 1) ಶ್ರೀ ಡಿ. ಶ್ರೀನಿವಾಸ್** ಬಿನ್ ಶ್ರೀ ದೊಡ್ಡಮಾರಯ್ಯ, ನಂ. 566, ನೆಲಮಹಡಿ, 7ನೇ 'ಸಿ' ಕ್ರಾಸ್, ಕುವೆಂಪು ವೃತ್ತದ ಹತ್ತಿರ, ಹೆಬ್ಬಾಳ 1ನೇ ಹಂತ, ಮೈಸೂರು. **ಮತ್ತೊಂದು ವಿಳಾಸ : ಶ್ರೀ ಡಿ. ಶ್ರೀನಿವಾಸ್** ಬಿನ್ ಶ್ರೀ ದೊಡ್ಡಮಾರಯ್ಯ, ಬೋವಿ ಕಾಲೋನಿ, ಕಸಬಾ ಹೋಬಳಿ, ಪಡುಕೋಟೆ ಅಂಚೆ, ಹೆಚ್.ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ–571114, **ಮತ್ತೊಂದು ವಿಳಾಸ : ಶ್ರೀ ಡಿ. ಶ್ರೀನಿವಾಸ್** ಬಿನ್ ಶ್ರೀ ದೊಡ್ಡಮಾರಯ್ಯ, ಫ್ಲಾಟ್ ನಂ. 301, 3ನೇ ಮಹಡಿ, 'ಸ್ವಾತಿ ಬೈರವ', ಡಿ ರಾಜಗೋಪಾಲ ರಸ್ತೆ, ಸಂಜಯನಗರ ಮುಖ್ಯ ರಸ್ತೆ, (ಆದೀಶ್ವರ ಎಲೆಕ್ಟ್ರಾನಿಕ್ಸ್ ಮೇಲ್ಭಾಗದಲ್ಲಿ) ಗೆದ್ದಲಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು–560094. **ಮತ್ತೊಂದು ವಿಳಾಸ : ಶ್ರೀ ಡಿ. ಶ್ರೀನಿವಾಸ್** ಬಿನ್ ಶ್ರೀ ದೊಡ್ಡಮಾರಯ್ಯ, ನಂ. 588, 'ಜೆ' ಮಹಡಿ, ಹೆಬ್ಬಾಳ 1ನೇ ಹಂತ, ಕುವೆಂಪು ವೃತ್ತದ ಹತ್ತಿರ, 7ನೇ 'ಡಿ' ಕ್ರಾಸ್, ಮೈಸೂರು. **2) ಶ್ರೀಮತಿ ಮಂಜುಳ** ಕೋಂ. ಶ್ರೀ ಡಿ. ಶ್ರೀನಿವಾಸ, ನಂ. 566, ನೆಲಮಹಡಿ, 7ನೇ 'ಸಿ' ಕ್ರಾಸ್, ಕುವೆಂಪು ವೃತ್ತದ ಹತ್ತಿರ, ಹೆಬ್ಬಾಳ 1ನೇ ಹಂತ, ಮೈಸೂರು. **ಮತ್ತೊಂದು ವಿಳಾಸ :** ಶ್ರೀಮತಿ ಮಂಜುಳ ಕೋಂ. ಶ್ರೀ ಡಿ. ಶ್ರೀನಿವಾಸ, ಬೋವಿ ಕಾಲೋನಿ, ಕಸಬಾ ಹೋಬಳಿ, ಪಡುಕೋಟೆ ಅಂಚೆ, ಹೆಚ್.ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ–571114, **ಮತ್ತೊಂದು ವಿಳಾಸ :** ಶ್ರೀಮತಿ ಮಂಜುಳ ಕೋಂ. ಶ್ರೀ ಡಿ. ಶ್ರೀನಿವಾಸ, ಫ್ಲಾಟ್ ನಂ. 301, 3ನೇ ಮಹಡಿ, 'ಸ್ವಾತಿ ಬೈರವ', ಡಿ ರಾಜಗೋಪಾಲ ರಸ್ತೆ, ಸಂಜಯನಗರ ಮುಖ್ಯ ರಸ್ತೆ, (ಆದೀಶ್ವರ ಎಲೆಕ್ಟ್ರಾನಿಕ್ಸ್ ಮೇಲ್ಭಾಗದಲ್ಲಿ) ಗೆದ್ದಲಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು–560094. **ಮತ್ತೊಂದು ವಿಳಾಸ :** ಶ್ರೀಮತಿ ಮಂಜುಳ ಕೋಂ. ಶ್ರೀ ಡಿ. ಶ್ರೀನಿವಾಸ, ನಂ. 588, ಜೆ" ಮಹಡಿ, ಹೆಬ್ಬಾಳ 1ನೇ ಹಂತ, ಕುವೆಂಪು ವೃತ್ತದ ಹತ್ತಿರ, 7ನೇ 'ಡಿ' ಕ್ರಾಸ್, ಮೈಸೂರು. ಇವರಿಂದ ಬರಬೇಕಾದ ಬಾಕಿ ಮೊತ್ತ **ರೂ. 2,27,13,655/–** (ರೂಪಾಯಿ ಎರಡು ಕೋಟಿ ಇಪ್ಪತ್ತೇಳು ಲಕ್ಷದ ಹದಿಮೂರು ಸಾವಿರದ ಆರು ನೂರ ಐವತ್ತೈದು ಮಾತ್ರ) **ದಿನಾಂಕ 29.10.2026** ರಂದು ಇದ್ದಂತೆ ಮತ್ತು 30.10.2026 ರಿಂದ ಒಪ್ಪಂದದ ದರದಲ್ಲಿ ಮುಂದಿನ ಬಡ್ಡಿ ಇದ್ದಂತೆ + ಬಡ್ಡಿ + ಖರ್ಚು, ವೆಚ್ಚಗಳು ಇತ್ಯಾದಿಗಳ ವಸೂಲಿಗಾಗಿ ಅಡಮಾನು ಮಾಡಿರುವ ಸ್ಥಿರಾಸ್ತಿಯನ್ನು **ದಿನಾಂಕ : 19.11.2026ರಂದು** ಇ–ಹರಾಜು ಮಾರಾಟ ಮಾಡಲಾಗುತ್ತಿದೆ.

ಮೀಸಲು ಬೆಲೆ, ಮುಂಗಡ ಠೇವಣಿ (ಇಎಂಡಿ) ಬಿಡ್ ಗುಣಾಂಕ ಮತ್ತು ಇ–ಹರಾಜಿನ ಸಮಯ ಮತ್ತು ಮಾರಾಟ ಮಾಡಲು ಸ್ಥಿರ ಆಸ್ತಿಗಾಗಿ ಕೆವೈಸಿ ದಾಖಲೆಗಳೊಂದಿಗೆ ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ ಈ ಕೆಳಗಿನಂತಿವೆ.

ಆಸ್ತಿ ಸಂಖ್ಯೆ	ಮೀಸಲು ಬೆಲೆ (ಈ ಮೊತ್ತಕ್ಕಿಂತ ಕಡಿಮೆ ಬೆಲೆಗೆ ಸ್ವತ್ತನ್ನು ಮಾರಾಟ ಮಾಡಲಾಗುವುದಿಲ್ಲ)	ಮುಂಗಡ ಠೇವಣಿ	ಬಿಡ್ ಏರಿಕೆಯ ಮೊತ್ತ	ಆಸ್ತಿಯ ಇ–ಹರಾಜಿನ ದಿನಾಂಕ, ಸಮಯ	ಇಎಂಡಿ ಸ್ವೀಕರಿಸಲು ಕೊನೆಯ ದಿನಾಂಕ
1	ರೂ. 1,60,00,000/-	ರೂ. 16,00,000/-	ರೂ. 1,00,000/-	19.11.2026, ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ	18.11.2026 ರಂದು ಅಥವಾ ಅದಕ್ಕಿಂತ ಮೊದಲು ಸಂಜೆ 5.30 ಗಂಟೆಯವರೆಗೆ

ಸ್ಥಿರಾಸ್ತಿಗಳ ವಿವರ : ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಂತೆ ಸ್ಥಿರಾಸ್ತಿ ಮುನಿಸಿಪ್ ನಂ. 3, ಬಿಬಿಎಂಪಿ ಆಸ್ತಿ ಐಡಿ ನಂ. 100–75–3, ಹೊಸ ಪಿಐಡಿ ನಂ. 018–ಎಂ0031–147, ಗೆದ್ದಲಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 52 ಅಡಿ X ಉತ್ತರದಿಂದ ದಕ್ಷಿಣಕ್ಕೆ : 115.3 ಅಡಿ, ಒಟ್ಟು ವಿಸ್ತೀರ್ಣ 5995.6 ಚದರ ಅಡಿ, ಇದು ಡಿ ರಾಜಗೋಪಾಲ್ ರಸ್ತೆ, ಗೆದ್ದಲಹಳ್ಳಿ, ಹಳೆ ಬಿಬಿಎಂಪಿ ವಾರ್ಡ್ ನಂ. 100, ಬಿಬಿಎಂಪಿ ಹೊಸ ವಾರ್ಡ್ ನಂ. 18, ವಾರ್ಡ್ ಹೆಸರು ರಾಧಾಕೃಷ್ಣ ದೇವಸ್ಥಾನ, ಎಲ್ಲಾ ನಾಗರೀಕ ಸೌಲಭ್ಯಗಳನ್ನು ಹೊಂದಿರುವ ನೆಲಮಹಡಿ ವಾಣಿಜ್ಯ, ಮೊದಲನೆ ಮಹಡಿ, ಎರಡನೇ ಮಹಡಿ ಮತ್ತು ಮೂರನೇ ಮಹಡಿಯ ವಸತಿ ಫ್ಲಾಟ್‌ಗಳನ್ನು ಹೊಂದಿರುವ ಕಟ್ಟಡವನ್ನು ಒಳಗೊಂಡಿದೆ. **ಚಕ್ಕುಬಂದಿ : ಪೂರ್ವಕ್ಕೆ :** ಎನ್. ರಮೇಶ್‌ರವರ ಆಸ್ತಿ, **ಪಶ್ಚಿಮಕ್ಕೆ :** ಸರ್ವೆ ನಂ. 34/1 ರಲ್ಲಿ ಉಳಿದಿರುವ ಆಸ್ತಿ, **ಉತ್ತರಕ್ಕೆ :** ಡಿ. ರಾಜಗೋಪಾಲ್ ರಸ್ತೆ, **ದಕ್ಷಿಣಕ್ಕೆ :** ಆದಿ ಕರ್ನಾಟಕದ ಮನೆ.

ಶೆಡ್ಯೂಲ್ "ಬಿ" ಆಸ್ತಿ : ಭೂ ಹಕ್ಕು, ಹಕ್ಕು ಮತ್ತು ಬಡ್ಡಿ, ಹಕ್ಕುಗಳ 500 ಚದರ ಅಡಿ ಅವಿಭಾಜಿತ ಪಾಲು ಅಥವಾ 'ಸಿ' ವೇಳಾಪಟ್ಟಿಯಲ್ಲಿರುವ ಯಾವುದಾದರೂ.

ಶೆಡ್ಯೂಲ್ "ಸಿ" ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಂತೆ ವಾಸಯೋಗ್ಯ ಫ್ಲಾಟ್ ನಂ. 301, ಮೂರನೇ ಮಹಡಿ, ವೆಟ್ರಿಫೈಡ್ ನೆಲಹಾಸು ನಿರ್ಮಾಣದೊಂದಿಗೆ "ಸ್ವಾತಿ ಬೈರವ" ಎಂದು ಕರೆಯಲ್ಪಡುವ ವಾಣಿಜ್ಯ ಮತ್ತು ವಾಸಯೋಗ್ಯ ಅಪಾರ್ಟ್‌ಮೆಂಟ್ ಕಟ್ಟಡವನ್ನು ಶೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾಗಿದೆ. ಸೂಪರ್ ನಿರ್ಮಿತ ಪ್ರದೇಶ 1800 ಚದರ ಅಡಿ, ಮೂರು ಬೆಡ್ ರೂಮ್‌ಗಳು, ಲಿವಿಂಗ್ ಮತ್ತು ಡೈನಿಂಗ್ ಹಾಲ್, ಕಿಚನ್, ಟಾಯ್ಲೆಟ್‌ಗಳು, ಬಾಲ್ಕನಿ ಜೊತೆಗೆ ಯುಟಿಲಿಟಿ ಪ್ರದೇಶ, ನೆಲಮಾಳಿಗೆಯಲ್ಲಿ ಒಂದು ಕವರ್ಡ್ ಕಾರ್ ಪಾರ್ಕಿಂಗ್, ಎಲ್ಲಾ ನಾಗರೀಕ ಸೌಲಭ್ಯಗಳೊಂದಿಗೆ, ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಪಾಲು ಸೇರಿದಂತೆ, ಪ್ಯಾಸೇಜ್, ಲಾಬೀಸ್, ಲಿಫ್ಟ್, ಮೆಟ್ಟಿಲುಗಳು, ಓವರ್ ಹೆಡ್ ವಾಟರ್ ಟ್ಯಾಂಕ್ ಮತ್ತು ಸಾಮಾನ್ಯ ಬಳಕೆಯ ಇತರ ಪ್ರದೇಶಗಳು, ಟೆರೇಸ್ ಪ್ರದೇಶವನ್ನು ಹೊರತುಪಡಿಸಿ, ಯಾವುದೇ ವಿಶೇಷ ಸೌಲಭ್ಯಗಳಿಲ್ಲದೆ.

ಶಾಸನಬದ್ಧ 15 ದಿನಗಳ ಮಾರಾಟದ ಸೂಚನೆ ("ಸರ್ಫೇಸಿ" ಕಾಯಿದೆ 2002ರ ಅಡಿಯಲ್ಲಿ ಹರಾಜು) : ಸಾಲಗಾರರು/ಜಾಮೀನುದಾರರು/ಕಾರ್ಪೋರೇಟ್ ಜಾಮೀನುದಾರರು/ಅಡಮಾನದಾರರು ಈ ನೋಟೀಸಿನ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗೆ ಮೇಲೆ ತಿಳಿಸಲಾದ ಮೊತ್ತವನ್ನು ಪಾವತಿಸಲು ಈ ಮೂಲಕ ತಿಳಿಸಲಾಗಿದೆ, ಅದು ವಿಫಲವಾದರೆ ಬ್ಯಾಂಕ್ ಸರ್ಫೇಸಿ ಕಾಯಿದೆ, 2002ರಲ್ಲಿ ನಿಗದಿಪಡಿಸಿದ ನಿಬಂಧನೆಗಳ ಪ್ರಕಾರ ಆಸ್ತಿಗಳನ್ನು ಮಾರಾಟ ಮಾಡುತ್ತದೆ.
ಹರಾಜಿನ ಹೆಚ್ಚಿನ ನಿಯಮ ಮತ್ತು ನಿಬಂಧನೆಗಳಿಗಾಗಿ ಅಧಿಕೃತ ಅಧಿಕಾರಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಸ್‌ಎಆರ್‌ಬಿ, ಬೆಂಗಳೂರು ಪ್ರತಿನಿಧಿಸುವ ಅಧಿಕೃತ ಅಧಿಕಾರಿಗಳು ಒದಗಿಸಿದ ಲಿಂಕ್‌ಗಳನ್ನು ದಯವಿಟ್ಟು ನೋಡಿ. https://baanknet.com
ಸ್ಥಿರ ಭದ್ರತೆಯ ಸ್ವತ್ತುಗಳನ್ನು ಮಾರಾಟ ಮಾಡಬೇಕಾದ ದಿನಾಂಕ ಮತ್ತು ಸಮಯ ಮತ್ತು ಉದ್ದೇಶಿತ ಬಿಡ್ದರ್‌ಗಳು, ಸ್ವತ್ತುಗಳು ಮತ್ತು ಅವುಗಳ ನಿರ್ದಿಷ್ಟತೆಯ ಬಗ್ಗೆ ತಮ್ಮನ್ನು ತಾವು ತೃಪ್ತಿಪಡಿಸಿಕೊಳ್ಳಬೇಕು. ಆಸ್ತಿಯನ್ನು ಪರಿವೀಕ್ಷಿಸಲು ಯಾವುದೇ ದಿನದಂದು **ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯೊಳಗೆ** ಪೂರ್ವ ನೇಮಕಾತಿಯೊಂದಿಗೆ. **ಆಸ್ತಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗಾಗಿ : ಶ್ರೀ ನಾಯಕ್, ಮೊ : 8971151617, ಶ್ರೀ ನಿತಿನ್, ಮೊ : 8618097517** ಇವರನ್ನು ಸಂಪರ್ಕಿಸಿ.

ದಿನಾಂಕ: 30.10.2026 ಸಹಿ/– ಅಧಿಕೃತ ಅಧಿಕಾರಿಗಳು
ಸ್ಥಳ: ಬೆಂಗಳೂರು ಭಾರತೀಯ ಸ್ಟೇಟ್ ಬ್ಯಾಂಕ್, ಎಸ್‌ಎಆರ್‌ಬಿ, ಬೆಂಗಳೂರು